# ಆನಂದದ ದಿವ್ಯ ಶಿಶು

ಪ್ರಾರ್ಥನೆಯ ಸಂದರ್ಭದಲ್ಲಿ ಮಗುವೊಂದು ಅಡ್ಡಿಪಡಿಸಿದರೆ ಏನು ಮಾಡಬೇಕು? ಈ ಪ್ರಶ್ನೆಗೆ ಉತ್ತರದ ರೂಪದಲ್ಲಿ, ಯೋಗೀಶ್ ಮಾಸ್ಟರ್ ಅವರ 'ನನ್ನ ಅರಿವಿನ ಪ್ರವಾದಿ' ಕೃತಿಯ ಒಂದು ಸೊಗಸಾದ ಪ್ರಸಂಗವನ್ನು ಗಮನಿಸಬಹುದು.

ಪ್ರವಾದಿ ಮುಹಮ್ಮದ್ ತಮ್ಮ ಹಣೆಯನ್ನು ನೆಲಕ್ಕೆ ಹಚ್ಚಿ ತನ್ಮಯತೆಯಿಂದ ನಮಾಜ್ ಮಾಡುತ್ತಿರುವ ಸಂದರ್ಭ; ಅದೇ ಸಮಯಕ್ಕೆ ಮಗುವೊಂದು ಅವರ ಬೆನ್ನೇರಿದೆ. ಆಡುವ ಹುಮ್ಮಸ್ಸಿನ ಮಗುವಿನ ಕಣ್ಣಿಗೆ ಪ್ರವಾದಿಗಳು ಕುದುರೆಯಂತೆ ಕಂಡಿರಬೇಕು. ಪ್ರಾರ್ಥನೆ ಮಾಡುತ್ತಿರುವವರು ಪ್ರವಾದಿಯೆಂದೂ, ಅವರ ಪ್ರಾರ್ಥನೆಗೆ ಅಡ್ಡಿಪಡಿಸಬಾರದೆನ್ನುವುದು ಕಂದಮ್ಮನಿಗೆ ತಿಳಿಯುವುದೆ? ಆದರೆ, ಮಗುವಿನ ಆಟಕ್ಕೆ ತಮ್ಮ ಧಾರ್ಮಿಕ ರೀತಿರಿವಾಜುಗಳು ತೊಡಕಾಗಬಾರದೆನ್ನುವುದು ಮುಹಮ್ಮದ್‌ರಿಗೆ ಗೊತ್ತಿತ್ತು. ಆ ಹಿರಿಯರು, ತಮ್ಮ ಪ್ರಾರ್ಥನೆ ಮುಗಿದರೂ ಮೇಲೇಳುವ ಗೋಜಿಗೆ ಹೋಗಲಿಲ್ಲ. ಮಗು ತಾನಾಗಿಯೇ ಬೆನ್ನಿಂದ ಇಳಿಯುವವರೆಗೂ ಕಂದನಿಗೆ ಕುದುರೆಯೇ ಆಗಿದ್ದರು. ಪ್ರಾರ್ಥನೆಗಿಂತಲೂ ಮಗುವಿನ ಆಟ ಸಣ್ಣದಲ್ಲ ಅಥವಾ ಮಗುವಿನ ಆಟ–ಆನಂದಕ್ಕೆ ಅನುವು ಮಾಡಿಕೊಡುವುದಕ್ಕಿಂತಲೂ ಮಿಗಿಲಾದ ಪ್ರಾರ್ಥನೆಯಿಲ್ಲ ಎನ್ನುವ ಅರಿವು ಮುಹಮ್ಮದ್‌ರ ನಡವಳಿಕೆಯಲ್ಲಿ ಇರುವಂತಿದೆ.

ಮಕ್ಕಳ ಕುರಿತಂತೆ ಇಸ್ಲಾಂನಲ್ಲಿರುವ ಕುತೂಹಲಕರ ನಂಬಿಕೆಗಳ ಉಲ್ಲೇಖಗಳು 'ನನ್ನ ಅರಿವಿನ ಪ್ರವಾದಿ' ಕೃತಿಯಲ್ಲಿವೆ. 'ಐದು ನೂರು ವರ್ಷಗಳ ಆಧ್ಯಾತ್ಮಿಕ ಸಾಧನೆಯ ಒಂದು ಮಗುವಿಗೆ ನೀಡುವ ಮುತ್ತಿಗೆ ಸಮ' ಎನ್ನುವ ಮಾತು, ಮಕ್ಕಳ ಜಗತ್ತು ನಮಗೆ ಕರುಣಿಸುತ್ತಿರುವುದೇನು ಎನ್ನುವುದನ್ನು ಸೂಚಿಸುವಂತಿದೆ. ಮಕ್ಕಳು ತಾವು ಇರುವೆಡೆ ಸ್ವರ್ಗವನ್ನು ಸೃಜಿಸುತ್ತಿರುತ್ತಾರೆ. ಆ ನಂದನವನ್ನು ನೋಡುವ ಕಣ್ಣುಗಳು ನಮಗೆ ಬೇಕಷ್ಟೇ. 'ಮಗುವನ್ನು ಪೋಷಕರಿಗೆ ಸೇರಿದ್ದೆಂದು ಭಾವಿಸಬಾರದು, ದೇವರ ವಿಶ್ವಾಸವೇ ಮಗುವಿನ ರೂಪದಲ್ಲಿ ಒದಗಿಬಂದಿದೆ' ಎನ್ನುವ ಇಸ್ಲಾಂನಲ್ಲಿನ ಮಾತು, ಮಗುವನ್ನು ದೇವರ ಪ್ರತಿನಿಧಿಯೆಂದು ಹೇಳುತ್ತಿರುವಂತಿದೆ.

ಮಕ್ಕಳನ್ನು ನಮ್ಮ ವಾರಸುದಾರರೆಂದು ಬಗೆಯುವ ನಡವಳಿಕೆಯೇ ಈ ಹೊತ್ತಿನ ಎಲ್ಲ ಕೇಡುಗಳಿಗೂ ಕಾರಣವಿರುವಂತಿದೆ. ಮಗುವನ್ನು ದೇವರ ರೂಪದಲ್ಲಿ, ದೇವರ ವಾರಸುದಾರನ ರೂಪದಲ್ಲಿ ನೋಡಿದಾಗ ನಮ್ಮ ಕ್ಷುದ್ರತೆ ಅರಿವಿಗೆ ಬರುವುದು. ಮಕ್ಕಳನ್ನು ಬೆಳೆಸುವುದು ಪೋಷಕರ ಕರ್ತವ್ಯವೆನ್ನುವ ರೂಢಿಗತ ಮಾತಿನಲ್ಲೇ ಅರಿವಿನ ಕೊರತೆಯಿದೆ. ಯೋಚಿಸಿ ನೋಡಿದರೆ, ಎಳೆಯರ ಬೆಳವಣಿಗೆ ಎನ್ನುವುದು ನೆಪವಷ್ಟೇ; ಮಕ್ಕಳ ಸಂಗದಲ್ಲಿ ಬೆಳೆಯಬೇಕಿರುವುದು ದೊಡ್ಡವರು! ನಾವು ಉಳಿಸಿಕೊಳ್ಳಲು ಸೋತ ಮಗುತನವನ್ನು, ಮತ್ತೊಮ್ಮೆ ಗಳಿಸಿಕೊಳ್ಳುವ ಅವಕಾಶವನ್ನು ಮಗು–ಮಕ್ಕಳು ಕಲ್ಪಿಸುತ್ತಾರೆ. ಅದನ್ನೇ ಕುವೆಂಪು ಹೇಳಿರುವುದು: 'ಮಕ್ಕಳ ಸಂಗದೊಳೆಚ್ಚರಗೊಳ್ಳಲಿ ಆನಂದದ ಆ ದಿವ್ಯ ಶಿಶು.' ಆದರೆ, ಆ ಅವಕಾಶವನ್ನು ಬಹಳಷ್ಟು ಮಂದಿ ಬಿಟ್ಟುಕೊಡುತ್ತಾರೆ ಹಾಗೂ ಮಕ್ಕಳನ್ನು ತಮ್ಮ ಇಚ್ಛೆಗೆ ತಕ್ಕಂತೆ ಬೆಳೆಸಲು ಮುಂದಾಗುತ್ತಾರೆ. ಮಗುವಿನ ದೇಹ ಮತ್ತು ಮನಸ್ಸಿನ ನಡುವಿನ ವ್ಯತ್ಯಾಸವನ್ನು ಅರಿತುಕೊಳ್ಳುವ ವೇಳೆಗೆ ಕಾಲ ಕೈಜಾರಿರುತ್ತದೆ. ವೈರುಧ್ಯ ನೋಡಿ: ಮಗುತನದ ಸಿದ್ಧಿಯ ಅವಕಾಶವನ್ನು ಬಿಟ್ಟುಕೊಡುವುದರ ಜೊತೆಗೆ, ಮಕ್ಕಳು ಮಾನಸಿಕವಾಗಿ ತಮ್ಮ ಮಗುತನವನ್ನು ಕಳೆದುಕೊಳ್ಳಲೂ ಹಿರಿಯರು ಕಾರಣರಾಗುತ್ತಾರೆ.

ಮಗುತನದ ಬಗೆಗಿನ ನಮ್ಮ ಪರಿಕಲ್ಪನೆಗಳೂ ಮಿತಿಯನ್ನುಳ್ಳವು. ಮಗುತನವೆಂದರೆ, ಲೌಕಿಕದ ತವಕತಲ್ಲಣಗಳನ್ನು ಅರಿಯಲಾಗದ ಮುಗ್ಧತೆಯಲ್ಲ. ಅದು, ಅಂತಃಕರಣಕ್ಕೆ ಸಂಬಂಧಿಸಿದ್ದು; ಇನ್ನೊಬ್ಬರ ಹಿತವನ್ನು ಬಯಸುವಂತಹದ್ದು; ನಮ್ಮ ವ್ಯಕ್ತಿತ್ವದ ವಿಕಾರಗಳನ್ನು ತಿಳಿಯಾಗಿಸಿಕೊಳ್ಳುತ್ತ, 'ಎಲ್ಲರ ನೋವನು ಬಲ್ಲವನಾದರೆ ಗೆಲ್ಲುವೆ ನೀನು ಜಗವನ್ನೆ' ಎನ್ನುವ ಮನೋಭಾವವನ್ನು ರೂಢಿಸಿಕೊಳ್ಳುವಂತಹದ್ದು. ಸರಳವಾಗಿ ಹೇಳುವುದಾದರೆ: ಮಾನವೀಯತೆಯ ದಾರಿಯಲ್ಲಿ ಮನುಷ್ಯನಾಗಲಿಕ್ಕೆ ಪ್ರಯತ್ನಿಸುವುದು.

'ಅನಾಥ ಮಕ್ಕಳ ಎದುರಿನಲ್ಲಿ ನಮ್ಮ ಮಕ್ಕಳನ್ನು ಮುದ್ದಿಸಬಾರದು' ಎನ್ನುವ ಪ್ರವಾದಿ ಮುಹಮ್ಮದರ ಮಾತು, ಮನುಷ್ಯತ್ವದ ವ್ಯಾಖ್ಯೆಯಂತಿದೆ; ನಾವು ರೂಢಿಸಿಕೊಳ್ಳಬೇಕಾದ ಮಾನವೀಯತೆಯ ಸ್ವರೂಪ ಹೇಗಿರಬೇಕೆನ್ನುವುದನ್ನು ಹೇಳುವಂತಿದೆ. ದೇವರ ವಿಶ್ವಾಸದ ರೂಪವಾದ ಮಕ್ಕಳ ನಡುವೆ ವ್ಯತ್ಯಾಸವಿಲ್ಲವಾದರೂ, ಮಗುತನದಿಂದ ದೂರವಾದ ಪಾಲಕರ ಜಗತ್ತಿನಲ್ಲಿ ವೈದೃಶ್ಯಗಳ ಸರಮಾಲೆಯೇ ಇರುತ್ತದೆ. ಆ ಕಾರಣದಿಂದಲೇ, ಕೆಲವು ಮಕ್ಕಳಿಗೆ ಅತಿಯೆನ್ನಿಸುವಷ್ಟು ಪ್ರೀತಿ ದೊರೆತರೆ, ಮತ್ತೆ ಕೆಲವು ಕಂದಮ್ಮಗಳು ವಾತ್ಸಲ್ಯದಿಂದ ವಂಚಿತವಾಗಿರುತ್ತವೆ. ಅಂಥ ಮಕ್ಕಳಿಗೆ ಆತ್ಮವಿಶ್ವಾಸ ತುಂಬುವಂತೆ ನಮ್ಮ ನಡವಳಿಕೆ ಇರಬೇಕೇ ಹೊರತು, ಅವರು ಕಳೆದುಕೊಳೆದುಕೊಂಡಿರುವುದೇನು ಎನ್ನುವುದನ್ನು ನೆನಪಿಸುವಂತಿರಬಾರದು.

ಮಗುವಿನ ನೋವನ್ನು ಅರಿಯುವ ಸಂವೇದನೆಯಲ್ಲಿ ಜಗತ್ತಿನ ಸಂಕಟಗಳನ್ನು ಅರ್ಥಮಾಡಿಕೊಳ್ಳುವ ಮನಸ್ಸೂ ಇದೆ ಎನ್ನುವುದು ಬಹುದೊಡ್ಡ ಮೌಲ್ಯ. ಮಕ್ಕಳ ಬಗೆಗಿನ ಯೋಚನೆ ವಿಶ್ವಶಾಂತಿಯ ಚಿಂತನೆಯೂ ಹೌದು; ಮಕ್ಕಳ ಕಾಳಜಿ ಎಲ್ಲ ಸಮಸ್ಯೆಗಳ ಶಮನಗೊಳಿಸುವ ದಾರಿಯೂ ಹೌದು.

ಇಸ್ಲಾಂ ಮಾತ್ರವಲ್ಲ, ಎಲ್ಲ ಧರ್ಮಗಳೂ ಮಕ್ಕಳನ್ನು ದೇವರ ಇರುವಿನ ರೂಪದಲ್ಲೇ ನೋಡುತ್ತವೆ. ದೇವರಂತೆ ಮಕ್ಕಳೂ ರಾಗ–ದ್ವೇಷಗಳಿಂದ ಮುಕ್ತವಾದವರು. ಮನುಷ್ಯರಾಗಿ ಹುಟ್ಟಿದ್ದರೂ ನಾವೆಲ್ಲರೂ ಮನುಷ್ಯರಾಗಿ ಬೆಳೆದು, ಬಾಳಿ, ಮನುಷ್ಯರಾಗಿಯೇ ಸಾಯುತ್ತೇವೆಯೆ ಎನ್ನುವ ಪ್ರಶ್ನೆಯನ್ನು ಅಂತಃಸಾಕ್ಷಿಯ ಮುಂದಿಟ್ಟರೆ ಹೌದೆನ್ನುವ ಉತ್ತರಗಳು ದೊರೆಯುವುದು ಕಷ್ಟ. ನಿಜವಾದ ಅರ್ಥದಲ್ಲಿ ನಾವೆಲ್ಲ ಮನುಷ್ಯರಾಗಿರುವುದು ಮಗುವಾಗಿದ್ದಾಗಲೇ. ಬಾಲ್ಯದ ಜೀವಕೋಶಗಳು ಒರಟಾಗುತ್ತಾ ಹೋದಂತೆ, ಮಗುತನದ ಮಾರ್ದವತೆಯನ್ನು ಕಳಕೊಳ್ಳುತ್ತಾ ಹೋದಂತೆ, ನಾವು ಭೌತಿಕವಾಗಿ 'ದೊಡ್ಡ'ವರೇನೋ ಆಗುತ್ತೇವೆ; ಅದರ ಜೊತೆಗೆ ಮನುಷ್ಯತ್ವದಿಂದ ಅಂತರವನ್ನೂ ಸಾಧಿಸುತ್ತಾ ಹೋಗುತ್ತೇವೆ.

ಮಗುವಾಗಿಯೇ ಉಳಿಯುವುದು ಯಾರಿಗೂ ಸಾಧ್ಯವಿಲ್ಲ. ಆದರೆ, ಮಗುತನ ಉಳಿಸಿಕೊಳ್ಳುವುದು ಅಸಾಧ್ಯವೇನಲ್ಲ. ಮಾನವೀಯತೆಯ ಮೂರ್ತರೂಪದಂತೆ ಇತಿಹಾಸ ಗುರ್ತಿಸಿರುವ ಯಾವುದೇ ಚೇತನವನ್ನು ಗಮನಿಸಿ ನೋಡಿ: ಅವರ ಬದುಕಿನ ಯಶಸ್ಸು ಅಡಗಿರುವುದು, ಮಗುತನವನ್ನು ತಮ್ಮ ಜೀವನದಲ್ಲಿ ಉಳಿಸಿಕೊಳ್ಳಲು ನಡೆಸಿದ ಪ್ರಯತ್ನದಲ್ಲಿ. ರಾಗದ್ವೇಷಗಳು ಸುಖದ ರೂಪದಲ್ಲಿ ನಮ್ಮನ್ನು ಆವರಿಸಿಕೊಳ್ಳಲು ಹವಣಿಸುವಾಗ, ಅವುಗಳಿಂದ ಹೊರತಾದ ಮಗುತನವನ್ನು ಉಳಿಸಿಕೊಳ್ಳುವುದು ಸುಲಭವೂ ಅಲ್ಲ, ಅದು ಎಲ್ಲರಿಗೂ ಸಾಧ್ಯವಾದುದೂ ಅಲ್ಲ. ಆದರೆ, ಸ್ವಲ್ಪ ಮಟ್ಟಿಗಾದರೂ ಮಗುತನ ಉಳಿಸಿಕೊಳ್ಳುವುದು ವ್ಯಕ್ತಿಗತ ಆರೋಗ್ಯಕ್ಕೂ ಒಳಿತು, ಸಮಷ್ಟಿ ಒಳಿತಿಗೂ ಪೂರಕ.

■ **ಚಂಪಕಮಾಲಾ**

## ಮಾತೇ ಮುತ್ತು

- ಹೊಂಗೆಯ ನಾಡು ಕನ್ನಡ, ಹುಣಸೆಯ ಬೀಡು ಕನ್ನಡ. ಸಿರಿಗಂಧದ ಸೀಮೆ ಸಿರಿವಂತರಿಗೆ, ಜಾಲಿಯ ನಾಡು ಶ್ರಮವಂತರಿಗೆ.

  —ಬರಗೂರು ರಾಮಚಂದ್ರಪ್ಪ

- ಹೆತ್ತವಳ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು.

  —ಗಾದೆ

- ಕನ್ನಡಿಗರು ವಿನಯಕ್ಕಾಗಿ ಬಗ್ಗಿ ನಡೆಯಬಹುದು. ಆದರೆ ರಿಕ್ತರಂತೆ ಕುಗ್ಗಿ ನಡೆಯಬೇಕಾಗಿಲ್ಲ.

  —ಕುವೆಂಪು

- ನಾನು ಬೇರೆ– ದೇಹ ಬೇರೆ ಎಂದು ತಿಳಿವು ತಂದುಕೊಂಡರೆ ರೋಗದ ಬಾಧೆಯು ಅತ್ಯಲ್ಪವಾಗುತ್ತದೆ.

  —ಎಮ್.ವಿ. ಸೀತಾರಾಮಯ್ಯ

- ಜಗಳ ಮಾಡಲು ಬಂದವನ ಎದುರು ಮೌನವಾಗು. ಅದು ಜಗಳದ ಬಾಗಿಲನ್ನು ಮುಚ್ಚುತ್ತದೆ.

  —ಎ.ಆರ್. ಕೃಷ್ಣಶಾಸ್ತ್ರಿ